4 ನಿಜವಾಗಿದ್ದಲ್ಲಿ, ಸೇತುವೆಯ ಎರಡೂ ಬದಿಗಳಲ್ಲಿ ರಸ್ತೆ ನಿರ್ಮಾಣವಾಗದಿರುವುದರಿಂದ ಸೇತುವೆಯು ನಿಷ್ಪ್ರಯೋಜಕವೆಂಬುದನ್ನು ಸರಕಾರ ಅರಿತಿಲ್ಲವೇ?

5 ಸೇತುವೆಯ ಇಕ್ಕೆಲಗಳಲ್ಲಿ ರಸ್ತೆ ನಿರ್ಮಾಣಕ್ಕೆ ಇರುವ ತೊಂದರೆಗಳೇನು, ಹಾಗೂ ಕೂಡಲೇ ಈ ರಸ್ತೆಗಳನ್ನು ನಿರ್ಮಿಸಲು ಸರಕಾರದ ಕ್ರಮಗಳೇನು?

6 ಸ್ಥಳೀಯ ಗ್ರಾಮಗಳಿಗೆ ಏಕೈಕ ಸಂಪರ್ಕ ಮಾರ್ಗವನ್ನು ರಸ್ತೆಯಾಗಿ ನಿರ್ಮಿಸಿ ಕೂಡಲೇ ಗ್ರಾಮಾಂತರಗಳ ಜನರು ತೊಂದರೆ ಅನುಭವಿಸುತ್ತಿರುವುದನ್ನು ಹಾಗೂ ಶಾಲೆಗಳಿಗೆ, ಕಾಲೇಜುಗಳಿಗೆ ಮಕ್ಕಳು ಹೋಗಿ ಬರಲು ಅನುಕೂಲ ಮಾಡಿಕೊಡಲು ಸರಕಾರ ಕ್ಷಿಪ್ರ ಕ್ರಮ ಜರುಗಿಸುವುದೆ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು.)

1 ಈ ಗ್ರಾಮಗಳನ್ನು ಸೇರುವ ರಸ್ತೆಯು ಹಳ್ಳಿ ರಸ್ತೆಯಾಗಿರುತ್ತದೆ. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಆದಾಗ್ಯೂ, ನಬಾರ್ಡ್ ಆರ್‌ಐಡಿಎಫ್-8 ರಡಿ ಲೋಕೋಪಯೋಗಿ ಇಲಾಖಾವತಿಯಿಂದ ದುರ್ಗಾನಗರ ಮಲ್ಲೇವು ಕೆಲ್ಲೀಗೇರಿ ಮೈಲಿಬೆನ್ನಿ ರಸ್ತೆಯ ಸರಪಳಿ 1.50ರಲ್ಲಿ 38.00 ಲಕ್ಷ ರೂ. ಮೊತ್ತದಲ್ಲಿ ಸೇತುವೆ ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಸೇತುವೆಯ ಕೂಡು ರಸ್ತೆ ನಿರ್ಮಾಣ ಮಾಡಲು ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಗೆ ಸ್ಥಳೀಯರು ನ್ಯಾಯಾಲಯದ ತಡೆಯಾಜ್ಞೆ ತಂದಿರುತ್ತಾರೆ.

2 ಭೂ ಸ್ವಾಧೀನ ಪ್ರಸ್ತಾವನೆಯನ್ನು ಸಹಾಯಕ ಕಮೀಷನರ್‌ಗೆ ಕಳುಹಿಸಲಾಗಿದೆ. ತಡೆಯಾಜ್ಞೆ ತೆರವಾದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

3 ನಿಜ. ಮೇಲ್ಕಂಡ ರಸ್ತೆಯ ಸರಪಳಿ 1.50ಕಿಮೀನಲ್ಲಿ ಸೇತುವೆ ನಿರ್ಮಾಣ ಮಾಡಲಾಗಿದೆ.

4 ಸೇತುವೆಯ ಕೂಡು ರಸ್ತೆ ನಿರ್ಮಾಣಕ್ಕೆ ಮೂಲ ಅಂದಾಜಿನಲ್ಲಿ ಅನುವು ಮಾಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೂಡು ರಸ್ತೆ ನಿರ್ಮಾಣವನ್ನು ಕೈಗೊಳ್ಳಲಾಗುವುದು.

5 ಮೇಲೆ ತಿಳಿಸಿರುವಂತೆ ಕೂಡು ರಸ್ತೆ ನಿರ್ಮಾಣ ಕೈಗೊಳ್ಳಲು ಅಗತ್ಯವಾದ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳುವ ಬಗ್ಗೆ ನ್ಯಾಯಾಲಯದ ತಡೆಯಾಜ್ಞೆ ತೆರವಾದ ನಂತರ ರಸ್ತೆ ಕಾಮಗಾರಿ ಪ್ರಾರಂಭಿಸಲಾಗುವುದು.

6 ಈ ರಸ್ತೆ ನಿರ್ಮಾಣವನ್ನು ನಬಾರ್ಡ್ ಯೋಜನೆಯಡಿ ತೆಗೆದುಕೊಂಡರೆ ಮಾತ್ರ ಈ ಇಲಾಖೆಯು ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದು.

5034 (6010) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಉನ್ನತ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯದಲ್ಲಿರುವ ದೈಹಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು; ಅವರುಗಳಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ನೀಡಲಾಗುತ್ತಿದೆಯೇ;

ಆ) ದೈಹಿಕ ಶಿಕ್ಷಕರುಗಳಲ್ಲಿ ಕೆಲವರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ನೀಡದೇ ಇರುವುದು ನಿಜವೆ; ಹೌದಾದಲ್ಲಿ, ನೀಡದಿರಲು ಕಾರಣಗಳೇನು; ಯಾವಾಗ ಅವರಿಗೆ ಈ ವೇತನ ಶ್ರೇಣಿಯನ್ನು ವಿಸ್ತರಿಸಿ ಅನುಕೂಲ ಮಾಡಿಕೊಡಲಾಗುವುದು; (ವಿವರ ನೀಡುವುದು)?

ಶ್ರೀ.ಡಿ. ಮಂಜುನಾಥ ಉನ್ನತ ಶಿಕ್ಷಣ ಸಚಿವರು.

ಅ) 8 ನೌಕರರು ರಾಜ್ಯ ವೇತನ ಶ್ರೇಣಿ ರೂ.3,300–6,300 ವೇತನ ಶ್ರೇಣಿ ಪಡೆಯುತ್ತಿದ್ದಾರೆ. ಎ.ಐ.ಸಿ.ಟಿ.ಇ ವೇತನ ಶ್ರೇಣಿ ಈವರೆಗೂ ನೀಡಿಲ್ಲ.

ಆ) ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್, ದೈಹಿಕ ಶಿಕ್ಷಕರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿ ಈವರೆಗೂ ನೀಡಿಲ್ಲ. ಎ.ಐ.ಸಿ.ಟಿ.ಇ ನಿಯಮಗಳಲ್ಲಿ ಪಾಲಿಟೆಕ್ನಿಕ್‌ನ ದೈಹಿಕ ಶಿಕ್ಷಕರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿ ನೀಡಲು ಅವಕಾಶವಿರುವುದಿಲ್ಲ.

5035 (5051) ಶ್ರೀ ಕೃಷ್ಣಮೂರ್ತಿ. ಕೆ.ಎಂ. (ಕಡೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

01. ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ನೇಮಕಾತಿ ಮಾಡಲು ಆರ್ಥಿಕ ಮಿತವ್ಯಯ ಅನ್ವಯಿಸುತ್ತದೆಯೇ;

02. ಅನ್ವಯಿಸದಿದ್ದರೆ ಈ ಬಗ್ಗೆ ನೇಮಕಾತಿ ಮಾಡಲು ಆದೇಶ ಮಾಡಲಾಗಿದೆಯೇ;

03. ಹಾಗಿದ್ದಲ್ಲಿ ಆದೇಶದ ವಿವರ ನೀಡುವುದು ;

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

01. ಆರ್ಥಿಕ ಇಲಾಖೆಯ, ಮಿತವ್ಯಯಕ್ಕೆ ಸಂಬಂಧಿಸಿದ ದಿನಾಂಕ: 05–07–2004ರ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 02 ಬಿಇಎಂ 2003ರ ಪ್ರಕಾರ ಈ ಕೆಳಗೆ ಉದ್ಧರಿಸಿದಂತೆ ನಿಷೇಧವನ್ನು ವಿಧಿಸಲಾಗಿದೆ.

'(h) The ban on recruitment/creation and filling up of posts also covers all grant-in aid institutions

(i) All the existing vacant posts or those falling vacant under grant-in-aid institutions should remain vacant without exception until further orders.'

ಅದಕ್ಕೆ ಪೂರ್ವದಲ್ಲಿ ಆರ್ಥಿಕ ಇಲಾಖೆಯ ದಿನಾಂಕ: 17–01–04ರ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2004ರ ಪ್ರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ದಿನಾಂಕ: 31–01–95ರ ಸುತ್ತೋಲೆ ಸಂಖ್ಯೆ: ಇಡಿ 450 ಎಸ್‌ಇಪಿ 92ರ ಪ್ರಕಾರ ಪ್ರತ್ಯಾಯೋಜಿಸಲಾದ ನೇಮಕಾತಿಗಳನ್ನು ಅನುಮೋದನೆ ಮಾಡುವ ಅಧಿಕಾರವನ್ನು ಸರ್ಕಾರ ಹಿಂತೆಗೆದುಕೊಂಡಿರುತ್ತದೆ.

02.03. ಈ ನಿರ್ಬಂಧವನ್ನು ಸಡಿಲಿಸಲು ಪರಿಶೀಲಿಸಲಾಗುವುದು ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ದಿನಾಂಕ: 30–06–2005ರಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿರುತ್ತಾರೆ.

5036 (5137) ಶ್ರೀ ಕೃಷಮೂರ್ತಿ.ಕೆ.ಎಂ. (ಕಡೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

01. ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ (ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಅಡ್ಡಿಯಾಗಿರುವುದು ನಿಜವೇ ;

02. ಹಾಗಿದ್ದರೆ ಇದರಿಂದ ಬೋಧನೆಗೆ ತೊಂದರೆಯಾಗಿರುವುದು ನಿಜವಲ್ಲವೇ ;

03. ಹಾಗಿದ್ದರೆ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು;